DPAR/174/EGV/2021-DESK2-dparegovsec

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 174 ಇಜಿವಿ 2021

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 04-02-2023

**ಸುತ್ತೋಲೆ**

ವಿಷಯ: ಗಣಕಯಂತ್ರ ಮತ್ತು ಇತರೆ ವಿದ್ಯುನ್ಮಾನ ಪರಿಕರಗಳ ಜೀವಿತಾವಧಿಯ ಮೇರೆಗೆ ವಿಲೇಗೊಳಿಸುವ ಕುರಿತು.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಸಿಆಸುಇ 46 ಇಆಇ 2013, ದಿನಾಂಕ: 06-08-2013

*****

ರಾಜ್ಯ ಸರ್ಕಾರದ ಇಲಾಖೆಗಳು / ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳಲ್ಲಿ ಗಣಕಯಂತ್ರ ಹಾಗೂ ಇನ್ನಿತರ ವಿದ್ಯುನ್ಮಾನ ಪರಿಕರಗಳನ್ನು ಖರೀದಿಸಿ ದಿನನಿತ್ಯದ ಕಛೇರಿ ಕೆಲಸದ ನಿಮಿತ್ತ ಬಳಸಿಕೊಳ್ಳಲಾಗುತ್ತಿದೆ. ಈ ರೀತಿ ಖರೀದಿಸಿದ ಗಣಕಯಂತ್ರ ಮತ್ತು ಇನ್ನಿತರ ಪರಿಕರಗಳು ಬಹಳ ವರ್ಷಗಳಿಂದ ಉಪಯೋಗಿಸುತ್ತಿದ್ದು, ತದನಂತರದ ದಿನಗಳಲ್ಲಿ ಬಳಕೆಗೆ ಬಾರದೆ ದಾಸ್ತಾನಿನ ಕೊಠಡಿಗಳಲ್ಲಿ ವಿಲೇ ಮಾಡಲು ಅವಕಾಶವಿಲ್ಲದೆ ನಿರುಪಯುಕ್ತ ವಸ್ತುವೆಂದು ಪರಿಗಣಿಸುತ್ತಿರುವುದರಿಂದ, ಅವುಗಳನ್ನು ಯಾವ ರೀತಿ ವಿಲೇ ಮಾಡಬೇಕು ಎಂಬುದರ ಬಗ್ಗೆ ಇಲಾಖೆ / ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳಿಂದ ಕೋರಿಕೆಗಳು ಬರುತ್ತಿವೆ. ಇವುಗಳನ್ನು ಪರಿಶೀಲಿಸಿ ಗಣಕಯಂತ್ರ ಮತ್ತು ವಿದ್ಯುನ್ಮಾನ ಪರಿಕರಗಳ ಜೀವಿತಾವಧಿಯ ಬಗ್ಗೆ ಸಂಬಂಧಪಟ್ಟ ಇಲಾಖೆ / ನಿಗಮ / ಮಂಡಳಿ ಮತ್ತು ಸ್ವಾಯತ್ತ ಸಂಸ್ಥೆಗಳು ಈ ಕೆಳಕಂಡ ಮಾನದಂಡವನ್ನು ಅನುಸರಿಸಿ ಆಯಾ ಸಚಿವಾಲಯದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಇಲಾಖಾ ತಾಂತ್ರಿಕ ಸಮಿತಿಯ ಅನುಮೋದನೆಯನ್ನು ಪಡೆದು ವಿಲೇ ಮಾಡುವ ಬಗ್ಗೆ ಪರಿಶೀಲಿಸಲು ಸೂಚಿಸಲಾಗಿದೆ.

1. ಇತ್ತೀಚಿನ ಗಣಕ ಕ್ಷೇತ್ರದಲ್ಲಿ ತಾಂತ್ರಿಕತೆ ತೀವ್ರವಾಗಿ ಬದಲಾಣೆಯಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಪ್ರತಿ ವರ್ಷ 20% ಸವಕಳಿಯೆಂದು ಪರಿಗಣಿಸಿ, ಗಣಕಯಂತ್ರ ಹಾಗೂ ಇತರೆ ಪರಿಕರಗಳ ಜೀವತಾವಧಿಯನ್ನು ಕನಿಷ್ಠ 5 ವರ್ಷಗಳೆಂದು ಪರಿಗಣಿಸುವುದು.

2. ಎಲ್ಲಾ ಇಲಾಖೆಗಳು ತಮ್ಮ ಇಲಾಖೆಗಳಲ್ಲಿ ಬರುವ EEE (Electrical and Electronics Equipment) ಗಳನ್ನು ಇನ್ವೆಂಟರೈಸ್ ಮಾಡತಕ್ಕದ್ದು.

3. ಕರ್ನಾಟಕ ಸರ್ಕಾರದ ಸಚಿವಾಲಯ ಹೊರತುಪಡಿಸಿ, ಇನ್ನಿತರ ಇಲಾಖೆ / ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳು ಗಣಕಯಂತ್ರ ಮತ್ತು ಇನ್ನಿತರ ವಿದ್ಯುನ್ಮಾನ ಪರಿಕರಗಳನ್ನು ಖರೀದಿಸಿ ನಂತರ ದಿನನಿತ್ಯದ ಕಛೇರಿ ಕೆಲಸದಲ್ಲಿ 5 ವರ್ಷಗಳ ಕಾಲ ಬಳಕೆಯ ತರುವಾಯ ಆಯಾ ಪರಿಕರಗಳನ್ನು ಸರಬರಾಜು ಮಾಡಿದ ಸಂಸ್ಥೆಗಳ / ನಿರ್ವಹಣೆಗಾಗಿ ನೀಡಲ್ಪಟ್ಟ / ನಿರ್ವಹಣೆ ಮಾಡಲು ಶಕ್ತವಿರುವ ಸಂಸ್ಥೆಗಳಿಂದ ರಿಪೇರಿಗೆ ಅರ್ಹವಲ್ಲದ ಪರಿಕರಗಳನ್ನು

ನಿರುಪಯುಕ್ತ ವಸ್ತುಗಳೆಂದು ಹಾಗೂ ಸದರಿ ಪರಿಕರಗಳನ್ನು ಉನ್ನತೀಕರಿಸಲು (upgrade) ಸಾಧ್ಯವಿಲ್ಲವೆಂದು ಪ್ರಮಾಣ ಪತ್ರವನ್ನು ಪಡೆಯುವುದು.

4. ಕರ್ನಾಟಕ ಸರ್ಕಾರದ ಸಚಿವಾಲಯದ ವಿವಿಧ ಇಲಾಖೆಗಳಿಗೆ ಕಛೇರಿ ಕೆಲಸದ ನಿಮಿತ್ತ ಗಣಕಯಂತ್ರ ಮತ್ತು ಇನ್ನಿತರ ಪರಿಕರಗಳನ್ನು ಆಯಾ ಇಲಾಖೆಗಳಿಗೆ ಕಛೇರಿ ಕೆಲಸಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಯಿಂದ ಒದಗಿಸಲಾಗುತ್ತಿದ್ದು. ಸದರಿ ಪರಿಕರಗಳ ಬಗ್ಗೆ ಸಂಬಂಧಪಟ್ಟ ಎಫ್.ಎಂ.ಎಸ್ (Facility Management System) ತಂಡದಿಂದ ದಿನನಿತ್ಯದ ಕಛೇರಿ ಕೆಲಸದಲ್ಲಿ 5 ವರ್ಷಗಳ ಕಾಲ ಬಳಕೆಯ ತರುವಾಯ ರಿಪೇರಿಗೆ ಅರ್ಹವಲ್ಲದ ಪರಿಕರಗಳನ್ನು ನಿರುಪಯುಕ್ತ ವಸ್ತುಗಳೆಂದು ಹಾಗೂ ಸದರಿ ಪರಿಕರಗಳನ್ನು ಉನ್ನತೀಕರಿಸಲು (upgrade) ಸಾಧ್ಯವಿಲ್ಲವೆಂದು ಪ್ರಮಾಣ ಪತ್ರವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯು ಪಡೆಯುವುದು.

5. ಇಲಾಖೆಗಳು / ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳು ಗಣಕಯಂತ್ರಗಳನ್ನು ವಿಲೇ ಮಾಡುವ ಮುನ್ನ ಪರಿಕರದಲ್ಲಿನ ಎಲ್ಲಾ ಮಾಹಿತಿಗಳನ್ನು ಮತ್ತು ಹಾರ್ಡ್ ಡಿಸ್ಕನ್ನು ನಾಶಪಡಿಸತಕ್ಕದ್ದು.

6. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಕಾಲಕಾಲಕ್ಕೆ ಹೊರಡಿಸುವ ಆದೇಶ ಇನ್ನಿತರ ಮಾರ್ಗಸೂಚಿಗಳನ್ವಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಅಧಿಕೃತ ಸಂಸ್ಥೆಯಾಗಿ ಪ್ರಮಾಣ ಪತ್ರ ಹೊಂದಿರುವ ಸಂಸ್ಥೆಗಳಿಗೆ ಮಾತ್ರ ಇ-ತ್ಯಾಜ್ಯ ವಿಲೇವಾರಿ ಮಾಡುವುದು.

7. ಇ-ತ್ಯಾಜ್ಯ ವಿಲೇವಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ / ನಿಯಮ ಹಾಗೂ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಆದೇಶ ಮತ್ತು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು.

8. ಇ-ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ರನ್ವಯ ವಿವಿಧ ಸರ್ಕಾರಿ ಇಲಾಖೆಗಳು(Bulk Consumer) ಅಡಿಯಲ್ಲಿ ಬರುತ್ತದೆ. Bulk Consumer ರವರ Form-2 ಅನ್ನು ನಿರ್ವಹಿಸುವುದು ಮತ್ತು Form-3 ವಾರ್ಷಿಕ Returns ನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಬೇಕು.

9. ಇಲಾಖೆಗಳಿಂದ ಉತ್ಪತ್ತಿಯಾಗುವ ಇ-ತ್ಯಾಜ್ಯವನ್ನು ಮರುಬಳಕೆ ಚಟುವಟಿಕೆಗೆ ಸಾಕಷ್ಟು ಸಾಮರ್ಥ್ಯವನ್ನು ಹೊಂದಿರುವ ಅಧಿಕೃತ ಇ-ತ್ಯಾಜ್ಯ ಮರುಬಳಕೆ (Recycle)ದಾರರಿಗೆ ಮಾತ್ರ ವಿಲೇವಾರಿ ಮಾಡಬೇಕು ಮತ್ತು ವಿಲೇವಾರಿ ಮಾಡಿದ ವರದಿಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲು ಕ್ರಮವಹಿಸುವುದು.

10. ಎಲ್ಲಾ ಇಲಾಖೆಗಳು ಮತ್ತು ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳು ಸರ್ಕಾರದ ಅನುದಾನದಲ್ಲಿ ಗಣಕಯಂತ್ರ ಮತ್ತು ಇತರೆ ವಿದ್ಯುನ್ಮಾನ ಪರಿಕರಗಳನ್ನು ಖರೀದಿ

ಮಾಡಿದಲ್ಲಿ, ಮೇಲಿನ ಸೂಚನೆಗಳನ್ನು ಪಾಲಿಸಿ, ನಂತರ ಅದರಲ್ಲಿ ಬರುವ ಆದಾಯವನ್ನು ಲೆಕ್ಕ ಶೀರ್ಷಿಕೆ: 0070-60-800-3-25 ರಡಿ ಜಮೆ ಮಾಡತಕ್ಕದ್ದು.

ಈ ಸುತ್ತೋಲೆಯನ್ನು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಜೀವಿ ಪರಿಸ್ಥಿತಿ ಮತ್ತು ಪರಿಸರ) ಯ ಟಿಪ್ಪಣಿ ಸಂಖ್ಯೆ: ಅಪಜೀ 77 ಇಎನ್‌ಜಿ 2021, ದಿನಾಂಕ: 05-11-2022 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 791 ವೆಚ್ಚ- 12/ 2022, ದಿನಾಂಕ: 17-01-2023 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

(ವಿ. ಪೊನ್ನುರಾಜ್)
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ)

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು

ಪ್ರತಿ:
1. ಪ್ರಧಾನ ಮಹಾಲೇಖಪಾಲರು (ಎ&ಇ), (ಜಿ & ಎಸ್‌ಎಸ್ ಎ), ಕರ್ನಾಟಕ, ಬೆಂಗಳೂರು
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ವಿಧಾನ ಸೌಧ / ವಿಕಾಸ ಸೌಧ / ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಎಲ್ಲಾ ಇಲಾಖಾ ಮುಖ್ಯಸ್ಥರು / ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳಿಗೆ - ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ
4. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು
5. ನಿರ್ದೇಶಕರು, ವಿದ್ಯುನ್ಮಾನ ನಾಗರೀಕರ ಸೇವಾ ವಿತರಣಾ ನಿರ್ದೇಶನಾಲಯ, ಬೆಂಗಳೂರು
6. ಕಾರ್ಯಕಾರಿ ನಿರ್ದೇಶಕರು, ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್, ಬೆಂಗಳೂರು
7. ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ಬೆಂಗಳೂರು
8. ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು
9. ಶಾಖಾ ರಕ್ಷ ಕಡತ